



# ಹೆನ್ರಿ ಫೋರ್ಡ್ ಪಿಟೀಲು ಸಂಗ್ರಹ

■ ಮಂಜುನಾಥ. ಡಿ.ಎಸ್.

ಹೆನ್ರಿ ಫೋರ್ಡ್ ವಾಹನ ಉದ್ದಿಮೆಯ ದಿಗ್ಗಜರೆಂದು ವಿಶ್ವವಿಖ್ಯಾತರಾಗಿರುವುದು ಎಲ್ಲರಿಗೂ ತಿಳಿದದ್ದೇ. ಫೋರ್ಡ್ ಕಂಪೆನಿಯ ಕಾರುಗಳು ಜಗತ್ತಿನಾದ್ಯಂತ ಜನಪ್ರಿಯವಾಗಿವೆ. ಆದರೆ ಅವರ ಸಂಗೀತ ಪ್ರೇಮದ ಮುಖ ಅನೇಕರಿಗೆ ಅಪರಿಚಿತ.

ತಮ್ಮ ಎಳವೆಯಲ್ಲಿ ಹಳ್ಳಿಗಳಲ್ಲಿ ನಡೆಯುತ್ತಿದ್ದ ನೃತ್ಯಗಳಿಂದ ಆಕರ್ಷಿತರಾಗಿದ್ದ ಫೋರ್ಡ್ ಅವರಿಗೆ ಪಿಟೀಲುಗಳೆಂದರೆ ಪಂಚಪ್ರಾಣ. ಯುವಕರಾಗಿದ್ದಾಗ ಅಗ್ಗದ ಪಿಟೀಲನ್ನು ಕೊಂಡು ಕಲಿಕೆ ಆರಂಭಿಸಿದರಾದರೂ ಉತ್ತಮ ವಾದಕರಾಗಲು ಸಾಧ್ಯವಾಗಲಿಲ್ಲ. ಆದರೆ ಅವರ ಪಿಟೀಲು ಪ್ರೇಮ ಮಾತ್ರ ಕುಂದಲಿಲ್ಲ.

1920ರಲ್ಲಿ ಯಶಸ್ವೀ ಉದ್ಯಮಿಯಾದ ನಂತರ ಅವರು ಅನೇಕ ಅಮೂಲ್ಯ ಪಿಟೀಲುಗಳನ್ನು ಖರೀದಿಸಿದರು. ಹೆಸರಾಂತ ವಾದಕರಾದ ಕಾರ್ಲೋ ಬರ್ಗೋನ್ಜಿ (1740), ಕಾರ್ಲೋ ಫರ್ಡಿನಾಡೋ ಲಾಂಡೊಲ್ಫಿ (1780), ನಿಕೊಲಾ ಗಗ್ಲಿಯಾನೊ (1735), ಆಂತೋನಿಯೊ ಸ್ಟ್ರಾದಿವರಿ (1703 ಮತ್ತು 1709), ನಿಕೊಲೊ ಅಮತಿ (1647) ಮುಂತಾದವರು ಬಳಸುತ್ತಿದ್ದ ವಯೊಲಿನ್‌ಗಳನ್ನು ತಮ್ಮದಾಗಿಸಿಕೊಂಡರು.

ವಯೊಲಿನ್ ವಾದನ ಹಾಗೂ ಸಾಂಪ್ರದಾಯಿಕ ನೃತ್ಯದ ಪುನರುಜ್ಜೀವನಕ್ಕಾಗಿಯೂ ಹೆನ್ರಿ ಫೋರ್ಡ್ ಶ್ರಮಿಸಿದರು. ಡೆಟ್ರಾಯ್ಟ್‌ನ ಹೆನ್ರಿ ಫೋರ್ಡ್ ಸಂಗ್ರಹಾಲಯದಲ್ಲಿ ಇಂತಹ ಅಮೂಲ್ಯ ಪಿಟೀಲುಗಳನ್ನು ಪ್ರದರ್ಶಿಸಲಾಗಿದೆ.